ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: : 22474 File No.:DSERT/ENGC/OTH/1/2024-TECD ದಿನಾಂಕ: 29-01-2024

## ಸುತ್ತೋಲೆ

ವಿಷಯ: ಶಾಲೆಗಳಲ್ಲಿ ಸಮಗ್ರ ಶಾಲಾ ಸುರಕ್ಷತೆ (comprehensive school safety- CSS) ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: No. KSNDMC/UNICEFF/2023/172 Dated:28-11-2023

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದಲ್ಲಿ ಆಗಾಗ್ಗೆ ಪ್ರವಾಹಗಳು, ಬರ ಪರಿಸ್ಥಿತಿಗಳು, ಚಂಡಮಾರುತದ ಉಲ್ಬಣ, ಶಾಖದ ಅಲೆಗಳು, ಸಿಡಿಲು ರಸ್ತೆ ಅಪಘಾತಗಳು ಮತ್ತು ಮುಳುಗುವಿಕೆ ಘಟನೆಗಳು, ಹಾವು ಕಡಿತಗಳು ಮುಂತಾದ ಅನೇಕ ಅಪಾಯಗಳು ಸಂಭವಿಸುತ್ತಿರುತ್ತವೆ. ತೀವ್ರ ಜಲ ಮತ್ತು ವಾಯು ಮಾಲಿನ್ಯವು ಸಂಬಂಧಿಸಿದ ಕ್ಷೇತ್ರಗಳಲ್ಲಿ ಒಂದಾಗಿದೆ. ಇದು ನೇರವಾಗಿ ಸಮುದಾಯದ ಮೇಲೆ ಪರಿಣಾಮ ಬೀರುತ್ತಿದೆ. ವಿಶೇಷವಾಗಿ ಮಕ್ಕಳು ಅನೇಕ ಅಪಾಯಗಳಿಗೆ ಬಲಿಯಾಗುವುದನ್ನು ಗುರುತಿಸಲಾಗಿದೆ. ನಗರ ಪ್ರದೇಶಗಳಲ್ಲಿ ರಚನಾತ್ಮಕ ಸುರಕ್ಷತೆ , ಆಹಾರ ಮತ್ತು ನೀರಿನ ಸುರಕ್ಷತೆ, ಸೈಬರ್ ಬಳಕೆ, ಭದ್ರತೆ ಹಾಗೂ ದುರ್ಬಳಕೆ, ಕಿರುಕುಳಗಳು ಸಹ ಪ್ರಮುಖ ಸವಾಲುಗಳು ಮತ್ತು ಅಪಾಯಗಳಾಗಿವೆ. ಮಕ್ಕಳು ಮನೆಯಿಂದ ಶಾಲೆಗೆ ಪ್ರಯಾಣಿಸುವಾಗ ಮತ್ತು ಶಾಲೆಯಿಂದ ಮನೆಗೆ ಹಿಂದಿರುಗುವಾಗ ಸುರಕ್ಷತಾ ಕ್ರಮಗಳನ್ನು ಅನುಸರಿಸಲು ಅರಿವಿನ ಅಗತ್ಯತೆ ಇರುತ್ತದೆ. ಆದುದರಿಂದ ಇಂತಹ ವಿಕೋಪಗಳಿಂದ ಮಕ್ಕಳನ್ನು ಸಂರಕ್ಷಿಸುವುದು ಮತ್ತು ಯಾವುದೇ ಅಪಾಯಗಳಿಗೆ ಒಳಗಾಗದಂತೆ ತಡೆಯುವ ಉದ್ದೇಶದಿಂದ ಶಾಲೆಗಳಲ್ಲಿ ಮಕ್ಕಳಿಗೆ ಶಿಕ್ಷಣ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಈ ಕುರಿತು ಜಾಗೃತಿ ಮೂಡಿಸುವುದು ಕರ್ನಾಟಕ ಸರ್ಕಾರದ ಪ್ರಧಾನ ಕಾಳಜಿಗಳಲ್ಲಿ ಒಂದಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ವಿಪತ್ತುಗಳು ಮತ್ತು ಅಪಾಯದ ಸಮಯದಲ್ಲಿ ಮಕ್ಕಳ ಬಗ್ಗೆ ಹೆಚ್ಚು ಕಾಳಜಿ ವಹಿಸುವ ಉದ್ದೇಶದಿಂದ ಶಿಕ್ಷಣ ಇಲಾಖೆ ಮತ್ತು UNICEF ಸಹಯೋಗದೊಂದಿಗೆ ಕರ್ನಾಟಕ ಸಮಗ್ರ ಶಾಲಾ ಸುರಕ್ಷತೆ (Comprehensive school safety- CSS) ಕಾರ್ಯಕ್ರಮವನ್ನು 2023 ರಿಂದ ಪ್ರಾರಂಭಿಸಿದೆ. ರಾಜ್ಯದಲ್ಲಿ ಜಿಲ್ಲೆ, ತಾಲ್ಲೂಕು ಮತ್ತು ಶಾಲಾ ಹಂತದವರೆಗೆ ವಿವಿಧ ಹಂತಗಳಲ್ಲಿ ಈ ಕುರಿತು ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ.

**1. ಕರ್ನಾಟಕ ಸಮಗ್ರ ಶಾಲಾ ಸುರಕ್ಷತೆ ಕಾರ್ಯಕ್ರಮದ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.**

- ಮಕ್ಕಳಿಗಾಗಿ ಸುರಕ್ಷಿತ ಕಲಿಕೆಯ ಸೌಲಭ್ಯಗಳನ್ನು ರಚಿಸುವುದು.
- ರಚನಾತ್ಮಕ ಮತ್ತು ರಚನಾತ್ಮಕವಲ್ಲದ ವಿಪತ್ತು ಮತ್ತು ಅಪಾಯಗಳಿಂದುಂಟಾಗುವ ಸಮಸ್ಯೆಗಳನ್ನು ಕಡಿಮೆಗೊಳಿಸಲು ಎಲ್ಲಾ ಶಾಲೆಗಳಲ್ಲಿ ಕ್ರಮ ವಹಿಸುವುದು.
- ಮಕ್ಕಳು ಮನೆಯಿಂದ ಶಾಲೆಗೆ ಪ್ರಯಾಣಿಸುವಾಗ ಮತ್ತು ಶಾಲೆಯಿಂದ ಮನೆಗೆ ಹಿಂದಿರುಗುವಾಗ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು.

**2. ಕರ್ನಾಟಕ ಸಮಗ್ರ ಶಾಲಾ ಸುರಕ್ಷತೆ ಕಾರ್ಯಕ್ರಮದ ಪ್ರಮುಖ ಉದ್ದೇಶಗಳು:**

- ಶಾಲಾ ಸುರಕ್ಷತೆ ಹಾಗೂ ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸುವುದು .
- ಮನೆಯಿಂದ ಶಾಲೆಗೆ ಮತ್ತು ಶಾಲೆಯಿಂದ ಮನೆಗೆ ಹಿಂದಿರುಗುವಾಗ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು.
- ರಾಜ್ಯದ ಎಲ್ಲಾ ಜಿಲ್ಲೆ, ತಾಲ್ಲೂಕು ಹಾಗೂ ಕ್ಲಸ್ಟರ್‌ಗಳಲ್ಲಿ ಶಾಲೆಗಳ ಸುರಕ್ಷತಾ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ವಿವಿಧ ಇಲಾಖೆಗಳ (ಸಾರ್ವಜನಿಕಶಿಕ್ಷಣಇಲಾಖೆ , ಆರೋಗ್ಯ ಇಲಾಖೆ, ಗ್ರಾಮೀಣ ಅಭಿವೃದ್ಧಿ ಇಲಾಖೆ, ಅಗ್ನಿಶಾಮಕದಳ ಮತ್ತು ತುರ್ತುಪರಿಸ್ಥಿತಿ ಸೇವೆಗಳು ಇತ್ಯಾದಿ) ಸಹಭಾಗಿತ್ವದಲ್ಲಿ ಎಲ್ಲಾ ಸಮಯದಲ್ಲೂ ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು.
- ರಾಜ್ಯ ಮತು ಜಿಲ್ಲಾ ಮಟ್ಟದಲ್ಲಿ ತರಬೇತುದಾರರ ಸಂಪನ್ಮೂಲ ತಂಡವನ್ನು ರಚಿಸಿಕೊಳ್ಳುವುದು. ಅವರ ಮೂಲಕ ಶಾಲಾ ಸುರಕ್ಷತಾ ಕಾರ್ಯಕ್ರಮ ಕುರಿತು ನೋಡಲ್ ಅಧಿಕಾರಿಗಳು/ಶಿಕ್ಷಕರಿಗೆ ತರಬೇತಿ ನೀಡುವುದು.

**3. ಕರ್ನಾಟಕ ಸಮಗ್ರ ಶಾಲಾ ಸುರಕ್ಷತೆ: ಶಾಲೆಗಳಲ್ಲಿ ಸುರಕ್ಷತಾ ಕ್ರಮಗಳ ಅನುಷ್ಠಾನ:**

1. ವಿಪತ್ತು ನಿರ್ವಹಣೆಯ ಸಮಿತಿ(Disaster Management) ರಚನೆ
2. ಜಾಗೃತಿ/ಸಂವೇದನಾ ಶೀಲ ಕಾರ್ಯಾಗಾರ
3. ಶಾಲಾ ವಿಪತ್ತು ನಿರ್ವಹಣಾ ಯೋಜನೆ ಯ ಮೌಲ್ಯಮಾಪನ ಮತ್ತು ನವೀಕರಣ ಕಾರ್ಯ ನಿರ್ವಹಿಸುವುದು.
4. ವಿಪತ್ತು ಹಾಗೂ ಅಪಾಯ-ಸಾಮರ್ಥ್ಯ ವಿಶ್ಲೇಷಣೆ .
5. ಶಾಲಾ ವಿಪತ್ತು ನಿರ್ವಹಣಾ ಯೋಜನೆ ಸಿದ್ಧಪಡಿಸುವುವುದು.
6. ವಿಪತ್ತು ನಿರ್ವಹಣಾ (Disaster Management- DM) ತಂಡಗಳು /ಕಾರ್ಯಪಡೆಗಳಲ್ಲಿ ಕೌಶಲ್ಯ ಅಭಿವೃದ್ಧಿ ಗೊಳಿಸುವುದು.
7. ಶಿಕ್ಷಕರು/ವಿದ್ಯಾರ್ಥಿಗಳು/ಪೋಷಕರು ಮತ್ತು ಸಿಬ್ಬಂದಿಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ ನೀಡುವುದು.
8. ಅಣುಕು ಪ್ರದರ್ಶನಗಳನ್ನು ನಿಯಮಿತವಾಗಿ ಆಯೋಜಿಸುವುದು.
9. ಅಪಾಯಕಾರಿ ಸನ್ನಿವೇಶಗಳನ್ನು ಕಡಿಮೆಗೊಳಿಸುವ ರಚನಾತ್ಮಕ ಕ್ರಮಗಳು
10. ಸಂಪನ್ಮೂಲ ದಾಸ್ತಾನುಗಳನ್ನು ಕಾಯ್ದಿರಿಸುವುದು (Ex.Fire extinguisher, first aid kit etc)

**4 . ಶಾಲೆಗಳಲ್ಲಿ ಸೂಚಿಸಿದ ಸುರಕ್ಷತಾ ಆಡಿಟ್ ಗಳನ್ನು  ಆಯೋಜಿಸುವುದು.**

1. ಬಿಲ್ಡಿಂಗ್ ಆಡಿಟ್ (PWD, ಸ್ಥಳೀಯ ಇಂಜಿನಿಯರಿಂಗ್  ಕಾಲೇಜುಗಳು ಇತರೆ ಸಂಸ್ಥೆಗಳ ಸಹಯೋಗದೊಂದಿಗೆ)
2. ಫೈರ್  ಸೇಫ್ಟಿ ಆಡಿಟ್ (ಸ್ಥಳೀಯ ಅಗ್ನಿಶಾಮಕ ಇಲಾಖೆಗಳ ಸಹಯೋಗದೊಂದಿಗೆ)
3. ಆಹಾರ ಸುರಕ್ಷತಾ ಲೆಕ್ಕಪರಿಶೋಧನೆ (ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಅಡಿಯಲ್ಲಿ ಮಧ್ಯಾಹ್ನದ ಊಟದ ನಿರೀಕ್ಷಕರ /ಆರೋಗ್ಯ ನಿರೀಕ್ಷಕರ ಮೂಲಕ ಇದನ್ನು ಆಯೋಜಿಸಬಹುದು.
4. ನೀರು ಮತ್ತು ನೈರ್ಮಲ್ಯ ಲೆಕ್ಕಪರಿಶೋಧನೆ (ಮುನ್ಸಿಪಲ್ ಕಾರ್ಪೋರೇಷನ್ ಪುರಸಭೆಯ ಸಹಯೋಗದೊಂದಿಗೆ ,ಶಾಲಾ ಆಡಳಿತ ಮತ್ತು ಆರೋಗ್ಯ ಇಲಾಖೆ ಸಹಯೋಗದೊಂದಿಗೆ)
5. ವಿದ್ಯುತ್ ಸುರಕ್ಷತಾ ಆಡಿಟ್ (ವಿದ್ಯುತ್ ಸರಬರಾಜು ಇಲಾಖೆ ಸಹಯೋಗದೊಂದಿಗೆ)

**5. ಶಾಲಾ ಸುರಕ್ಷತಾ ಸಮಿತಿ  (SSC) School Safety Committee**

ವಿಕೋಪಗಳಿಂದ ಮಕ್ಕಳನ್ನು ಸಂರಕ್ಷಿಸುವುದು ಮತ್ತು ಯಾವುದೇ ಅಪಾಯಗಳು ಒಳಗಾಗದಂತೆ ತಡೆಯುವ ಉದ್ದೇಶದಿಂದ ಪ್ರತಿ ಶಾಲೆಯಲ್ಲೂ ವಿಪತ್ತು ನಿರ್ವಹಣಾ ಸಮಿತಿಯನ್ನು ರಚಿಸಬೇಕು. ಶಾಲಾಭಿವೃದ್ಧಿ ಸಮಿತಿಯು  ವರ್ಷವಿಡೀ ಶಾಲಾ ಸುರಕ್ಷತಾ ಸಮಿತಿಯ ಮೇಲ್ವಿಚಾರಣೆ ಮಾಡುವುದು ಅತ್ಯಗತ್ಯ.

**ಸಮಿತಿಯ ರಚನೆಯ ನಿಯಮಗಳು ಈ ಕೆಳಗಿನಂತಿದೆ:**

1. ಅಧ್ಯಕ್ಷರು: ಸಂಸ್ಥೆಯ ಮುಖ್ಯಸ್ಥರು (ಪ್ರಾಂಶುಪಾಲರು ಅಥವಾ ಮುಖ್ಯೋಪಾಧ್ಯಾಯರು) .
2. ವಿದ್ಯಾರ್ಥಿ ಸುರಕ್ಷತಾ ಅಧಿಕಾರಿ (Student Safety Officer- SSO) ಅಥವಾ ಮಕ್ಕಳ ರಕ್ಷಣಾ ಅಧಿಕಾರಿ  ( Child protect Officer-CPO) ಶಾಲೆಯ ಬೋಧಕ ಅಥವಾ ಬೋಧಕೇತರ ಸಿಬ್ಬಂದಿಯಿಂದ ನಾಮ ನಿರ್ದೇಶನ ಮಾಡಬಹುದಾದ ಒಬ್ಬ ಶಿಕ್ಷಕರಾಗಿರಬೇಕು. SSO/CPO ರವರು ಶಾಲಾ ಮುಖ್ಯಸ್ಥರಿಗೆ ಸಹಾಯ ಒದಗಿಸುತ್ತಾರೆ. CPO ಒಬ್ಬ ಗುತ್ತಿಗೆ ಉದ್ಯೋಗಿ ಅಥವಾ ಅರೆಕಾಲಿಕ ಉದ್ಯೋಗಿಯಾಗಿರದೇ ಖಾಯಂ ಉದ್ಯೋಗಿ ಯಾಗಿರಬೇಕು. 2021 ರ ಶಾಲಾ ಸುರಕ್ಷತೆ ಮತ್ತು ಭದ್ರತಾ ಮಾರ್ಗಸೂಚಿಗಳ ಪ್ರಕಾರ ಮತ್ತು ಸಾಕ್ಷರತಾ ಇಲಾಖೆ, ಶಿಕ್ಷಣ ಸಚಿವಾಲಯ, ಭಾರತ ಸರ್ಕಾರ ರವರ ನಿಯಮಗಳಲ್ಲಿ ಸೂಚಿಸಿರುವ ಪ್ರಕಾರ ಶಾಲೆಯಲ್ಲಿ ಕನಿಷ್ಠ 5 ವರ್ಷಗಳ  ಸೇವೆ ಮತ್ತು ಮೇಲಾಗಿ, ಮಕ್ಕಳ ಮನೋವಿಜ್ಞಾನದ ಹಿನ್ನೆಲೆ ಮತ್ತು ಸಮಾಲೋಚನೆ ಅಥವಾ ಮಕ್ಕಳೊಂದಿಗೆ ಕೆಲಸ ಮಾಡಿದ ಅನುಭವ ಮತ್ತು ಮಕ್ಕಳ ರಕ್ಷಣಾ ಕಾಳಜಿಗಳು ಮತ್ತು ಕಾರ್ಯವಿಧಾನಗಳೊಂದಿಗೆ ಪರಿಚಯವಿರುವ ಶಿಕ್ಷಕರನ್ನೇ CPO (Child Protect Officer)ಆಗಿ ನಾಮನಿರ್ದೇಶನ ಮಾಡಬೇಕು.
3. ಅಧ್ಯಾಪಕ ಪ್ರತಿನಿಧಿಗಳು: ಬೋಧಕ ಅಥವಾ ಬೋಧಕೇತರ ಸಿಬ್ಬಂದಿಯಿಂದ 2 ಅಥವಾ ಹೆಚ್ಚಿನ ಪ್ರತಿನಿಧಿಗಳು, ಅದರಲ್ಲಿ ಕನಿಷ್ಠ ಒಬ್ಬರು ಮಹಿಳೆಯರಾಗಿರಬೇಕು.
4. ಪೋಷಕ ಪ್ರತಿನಿಧಿಗಳು: ಇಬ್ಬರು ಪೋಷಕರಿರಬೇಕು. ಅವರಲ್ಲಿ ಒಬ್ಬ ಪೋಷಕರು ಶಾಲಾಭಿವೃದ್ಧಿ ಸಮಿತಿ (SDMC)  ಅಥವಾ ಪೋಷಕ ಶಿಕ್ಷಕರ ಸಂಘದ  ( Parent Teacher Association -PTA) ಪೋಷಕ ಪ್ರತಿನಿಧಿಯೂ ಆಗಿರಬೇಕು. ಮತ್ತೊಬ್ಬರು ಯಾವುದೇ ಪೋಷಕರಾಗಿರಬಹುದು. ಪೋಷಕರ ಸದಸ್ಯತ್ವ ಅವಧಿಯು ಒಂದು  ವರ್ಷ ಅವಧಿ ಮೀರಬಾರದು.
5. ವಿದ್ಯಾರ್ಥಿ ಪ್ರತಿನಿಧಿಗಳು: ಶಾಲೆಯ ಉನ್ನತ ತರಗತಿಯ ಇಬ್ಬರು ವಿದ್ಯಾರ್ಥಿಗಳು. ಒಬ್ಬ ವಿದ್ಯಾರ್ಥಿ  ಮತ್ತು ಒಬ್ಬ ವಿದ್ಯಾರ್ಥಿನಿ ಸಮಿತಿಯಲ್ಲಿ ಸದಸ್ಯರಿರಬೇಕು.

6. ಹಳೆಯ ವಿದ್ಯಾರ್ಥಿಗಳ ಪ್ರತಿನಿಧಿಗಳು (ಐಚ್ಛಿಕ): 1 ಅಥವಾ 2 ಸಕ್ರಿಯ ಹಳೆಯ ವಿದ್ಯಾರ್ಥಿಗಳ ಪ್ರತಿನಿಧಿಗಳು ಶಾಲೆಯ ಅಭಿವೃದ್ಧಿಗಾಗಿ ಉತ್ಸಾಹವನ್ನು ಹೊಂದಿದ್ದರೆ ಅಂತಹ ವಿದ್ಯಾರ್ಥಿಗಳನ್ನು ಆಯ್ಕೆಮಾಡಿಕೊಳ್ಳಬಹುದು.
7. ಶಾಲಾ ಸುರಕ್ಷತಾ ಸಮಿತಿಯು ತ್ರೈಮಾಸಿಕ ಸಭೆಗಳನ್ನು ನಡೆಸಿ ಸಭಾ ನಡಾವಳಿಗಳನ್ನು ನಿರ್ವಹಿಸಬೇಕು ಮತ್ತು ದಾಖಲೆಗಳಿಗೆ ಲಭ್ಯವಾಗುವಂತೆ ಕ್ರಮವಹಿಸಬೇಕು.

**ಶಾಲಾ ಸುರಕ್ಷತಾ ಸಮಿತಿಯ ಕಾರ್ಯಕ್ರಮಗಳು**:

1. ಶಾಲಾ ಸುರಕ್ಷತಾ ಸಮಿತಿಯು ಪ್ರತಿ ತ್ರೈಮಾಸಿಕಕ್ಕೆ ಒಮ್ಮೆ ಇಡೀ ಶಾಲಾ ಅವರಣದ ಸುರಕ್ಷತೆಯನ್ನು ವೀಕ್ಷಿಸಬೇಕು. ಸುರಕ್ಷತಾ ಕ್ರಮಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ವಿದ್ಯಾರ್ಥಿಗಳ ಜೊತೆಗೆ ಶಾಲಾ ಸುರಕ್ಷತಾ ಸಮಿತಿಯ ಎಲ್ಲಾ ಸದಸ್ಯರು ಪ್ರತಿ ಸುರಕ್ಷತಾ ವೀಕ್ಷಣೆಯಲ್ಲಿ ಸಾಧ್ಯವಾದಷ್ಟು ಹಾಜರಿರಬೇಕು.
2. ಸುರಕ್ಷತಾ ಕ್ರಮಗಳ ಕುರಿತು ಪ್ರತಿಕ್ರಿಯೆ/ದೂರು ಪೆಟ್ಟಿಗೆಗಳನ್ನು ಒಂದು-ಎರಡು ಪ್ರಮುಖ ಸ್ಥಳಗಳಲ್ಲಿ ನಿರ್ವಹಿಸಬೇಕು. ಶಾಲೆಯ ಸುರಕ್ಷತಾ ವೀಕ್ಷಣೆಯ ಸಮಯದಲ್ಲಿ ಅದನ್ನು ತೆರೆಯಬೇಕು ಮತ್ತು ಕ್ರಮ ತೆಗೆದುಕೊಳ್ಳಬೇಕು. ಸಲಹೆ ಪೆಟ್ಟಿಗೆಗಳನ್ನು ತೆರೆದ 15 ದಿನಗಳಲ್ಲಿ ಪ್ರಶ್ನೆಗಳು /ದೂರುಗಳು/ಸಲಹೆಗಳ ಬಗ್ಗೆ ಕ್ರಮವಹಿಸುವುದು.
3. ವಾರ್ಷಿಕ ಕ್ಯಾಲೆಂಡರ್ ಮತ್ತು ವಿಶೇಷ ದಿನದ ವೀಕ್ಷಣೆಗಳು

   ಶಿಕ್ಷಕರು, ಬೋಧಕೇತರ ಸಿಬ್ಬಂದಿಗಳು ,ಶಾಲಾಭಿವೃಧ್ಧಿ ಸಮಿತಿ, ವಿದ್ಯಾರ್ಥಿಗಳು ಮತ್ತು ಪೋಷಕರು ಸೇರಿದಂತೆ ಭಾಗವಹಿಸುವರು.

- ಅಪಾಯಕಾರಿ ವಿಪತ್ತು ಸಂದರ್ಭಗಳ ವಿಶ್ಲೇಷಣ (ಶಾಲೆ ಪ್ರಾರಂಭವಾದ ಒಂದು ತಿಂಗಳೊಳಗೆ): ಸಂಭಾವ್ಯ ಅಪಾಯಗಳನ್ನು ವಿಶ್ಲೇಷಿಸುವ ಮೂಲಕ ಜನರು, ಆಸ್ತಿ, ಸೇವೆಗಳು, ಜೀವನೋಪಾಯಗಳು ಮತ್ತು ಅವರು ಅವಲಂಬಿಸಿರುವ ಪರಿಸರಕ್ಕೆ ಹಾನಿಯುಂಟುಮಾಡುವ ಪರಿಸ್ಥಿತಿಗಳನ್ನು ಮೌಲ್ಯಮಾಪನ ಮಾಡುವ ಮೂಲಕ ವಿಪತ್ತಿನ ಅಪಾಯದ ಸ್ವರೂಪ ಮತ್ತು ವ್ಯಾಪ್ತಿಯನ್ನು ನಿರ್ಧರಿಸಲು ಪ್ರತಿ ಶಾಲೆಯು ಗುಣಾತ್ಮಕ ಅಥವಾ ಪರಿಮಾಣಾತ್ಮಕ ವಿಧಾನವನ್ನು ನಡೆಸಬೇಕು. ಸ್ಥಳೀಯ ಆಡಳಿತಗಳು, ಇತರೆ ಇಲಾಖೆಗಳು ಮತ್ತು PTA, SSC ಮತ್ತು ಸಮುದಾಯದ ಸದಸ್ಯರ ಸಹಯೋಗದಲ್ಲಿ ಕಾರ್ಯಕ್ರಮವನ್ನು ಆಯೋಜಿಸಬೇಕು.
- ಪ್ರತಿ ಶಾಲೆಯು ಶಿಕ್ಷಕರಿಗೆ, ಬೋಧಕೇತರ ಸಿಬ್ಬಂದಿಗಳಿಗೆ ,PTA, SSC ವಿದ್ಯಾರ್ಥಿಗಳಿಗೆ ವಿಪತ್ತು ನಿರ್ವಹಣೆ ಕುರಿತ ಸಾಮರ್ಥ್ಯಾಧಾರಿತ ತರಬೇತಿ (HVRCA- Hazard vulnerability Risk Capacity Analysis) ಯನ್ನು ಆಯೋಜಿಸಬೇಕು.

**ಸೂಚಿತ ಮಾಸಿಕ ಚಟುವಟಿಕೆಗಳು**:

**ಜೂನ್ 01:**

- ಅಂತರಾಷ್ಟ್ರೀಯ ಮಕ್ಕಳ ರಕ್ಷಣಾ ದಿನ-ಮಕ್ಕಳ ಸುರಕ್ಷತೆ ಮತ್ತು ರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮ
- ಜೂನ್ 05: ವಿಶ್ವ ಪರಿಸರ ದಿನದ ಜಾಗೃತಿ ಕಾರ್ಯಕ್ರಮ/ಚಟುವಟಿಕೆ ಪರಿಸರ ಸಂರಕ್ಷಣೆ ಕುರಿತು.
- ಜೂನ್ 12, ವಿಶ್ವ ಬಾಲಕಾರ್ಮಿಕ ವಿರೋಧಿ ದಿನ-ಬಾಲಕಾರ್ಮಿಕ ಜಾಗೃತಿ ಕಾರ್ಯಕ್ರಮ.
- ಸೈಕ್ಲೋನ್ ಸಮಯದಲ್ಲಿ ಮಕ್ಕಳಿಗೆ DO's ಮತ್ತು DOnt's ಗಳ ಪರಿಚಯ ಮಾಡಿಸುವುದು. ಮಿಂಚು ಮತ್ತು ಗುಡುಗಿನ ಸಮಯದಲ್ಲಿ ಮಕ್ಕಳಿಗೆ Dos DOnt's ಪರಿಚಯ ಮಾಡಿಸುವುದು.

**ಜುಲೈ:**

- ಪ್ರವಾಹಗಳ ಸಂದರ್ಭಗಳಲ್ಲಿ DO`s ಮತ್ತು DOnt'sಗಳ ಪರಿಚಯ ಮಾಡಿಸುವುದು
- DROWNING (ನೀರಿನಲ್ಲಿ ಮುಳುಗುವ ) ಸಮಯದಲ್ಲಿ DO's ಮತ್ತು DOnt'sಗಳ ಪರಿಚಯ ಮಾಡಿಸುವುದು. ಈಜು ಹಾಗೂ ಸುರಕ್ಷತಾ ಕ್ರಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ.

**ಆಗಸ್ಟ್:**

- ಡೆಂಗ್ಯೂ ಜ್ವರ, ಮಲೇರಿಯಾ, ವೈರಲ್ ಜ್ವರ ಮತ್ತು ಇತರ ಸಾಂಕ್ರಾಮಿಕ ರೋಗಗಳ ಅಪಾಯಗಳ ಅರಿವು ಕುರಿತು ಆರೋಗ್ಯ ಕಾರ್ಯಕ್ರಮಗಳು. ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಮುಟ್ಟಿನ ನೈರ್ಮಲ್ಯ ಕುರಿತು ಜಾಗೃತಿ. (ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ)ಮೂಡಿಸುವುದು.

**ಸೆಪ್ಟೆಂಬರ್:**

- ಹಾವು ಕಡಿತ, ನಾಯಿ ಕಡಿತಕ್ಕೆ ಪ್ರಥಮ ಚಿಕಿತ್ಸೆ. ಹಾವು ಕಡಿತದ ಸಾಧ್ಯತೆಗಳ ಬಗ್ಗೆ ಅರಿವು ಮೂಡಿಸುವುವುದು. DOs ಮತ್ತು DONs ಗಳ ಪರಿಚಯ ಮಾಡಿಸುವುದು

**ಅಕ್ಟೋಬರ್:**

- International Exhibition Centre –IEC ವಸ್ತು ಪ್ರದರ್ಶನ. ಅತಿಥಿ ಉಪನ್ಯಾಸಕರುಗಳು ಇತ್ಯಾದಿ.
- ಅಕ್ಟೋಬರ್:-15 ವಿಶ್ವ ಕೈ ತೊಳೆಯುವ ದಿನ. ನೈರ್ಮಲ್ಯ ಕುರಿತು ಜಾಗೃತಿ ಕಾರ್ಯಕ್ರಮ .
- ಅಕ್ಟೋಬರ್:-16 ವಿಶ್ವ ಆಹಾರ ದಿನದ ಆಚರಣೆ (ಆಹಾರ ಸುರಕ್ಷತೆ, ಆಹಾರ ಸುರಕ್ಷತಾ ಆಡಿಟ್ ಕುರಿತು ಸಾಮರ್ಥ್ಯ ನಿರ್ಮಾಣ)
- ಮನೋಸಾಮಾಜಿಕ ಆರೈಕೆ – ಮಾನಸಿಕ ಆರೋಗ್ಯದ Mental well being) ಬಗ್ಗೆ ಜಾಗೃತಿ ಮೂಡಿಸುವುದು.

**ನವೆಂಬರ್:**

- ನವೆಂಬರ್-14 ಮಕ್ಕಳ ದಿನಾಚರಣೆ-ಮಕ್ಕಳ ರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮ (ಕಿರುಕುಳಗಳು, ಬೆದರಿಸುವಿಕೆ, ಸೈಬರ್ ಭದ್ರತೆ ಕುರಿತು ಜಾಗೃತಿ ಕಾರ್ಯಕ್ರಮ)
- ನವೆಂಬರ್ – 19 ವಿಶ್ವ ಶೌಚಾಲಯ ದಿನ- ಸ್ವಚ್ಛತೆ ಕುರಿತು ಚಟುವಟಿಕೆಗಳು
- ನೈರ್ಮಲ್ಯ ಮತ್ತು ಶುಚಿತ್ವದ ಬಗ್ಗೆ ತರಬೇತಿ ಆಯೋಜಿಸುವುದು.
- ಅಗ್ನಿ ಮತ್ತು ವಿದ್ಯುತ್ ಶಾಕ್ ಸುರಕ್ಷತಾ ಕಾರ್ಯಕ್ರಮ-(ಎಲೆಕ್ಟ್ರಿಕ್ ಶಾಕ್ ಮತ್ತು ಅಗ್ನಿ ಸುರಕ್ಷತಾ ಅಣಕು- ಪ್ರದರ್ಶನದ ಮೂಲಕ ಮಕ್ಕಳಿಗೆ ಅರಿವು ಮೂಡಿಸುವುದು.

**ಡಿಸೆಂಬರ್:**

- **ಚಂಡ ಮಾರುತದ ಉಲ್ಬಣ:** ಕರಾವಳಿ ಜಿಲ್ಲೆಗಳಲ್ಲಿನ ಮಕ್ಕಳಿಗೆ ಚಂಡಮಾರುತದ ಉಲ್ಬಣದಿಂದ ಉಂಟಾಗುವ ಪರಿಣಾಮಗಳನ್ನು ತಪ್ಪಿಸಲು ಕೈಗೊಳ್ಳುವ ಕ್ರಮಗಳ ಬಗ್ಗೆ ಅರಿವು ಮೂಡಿಸುವುದು.

**ಜನವರಿ:**

- ಜನವರಿ 11 ಮಾನವ ಕಳ್ಳಸಾಗಣೆ ಜಾಗೃತಿ ದಿನ – ಮಕ್ಕಳ ರಕ್ಷಣೆ ಕುರಿತು ಜಾಗೃತಿ ಕಾರ್ಯಕ್ರಮ (ಶಾಲೆಯ ಸುರಕ್ಷತೆ ಮತ್ತು ಭದ್ರತೆಯ ಮಾರ್ಗಸೂಚಿಗಳು).

- ರಸ್ತೆ ಸುರಕ್ಷತಾ ಸಪ್ತಾಹ (ಜನವರಿ 11 ರಿಂದ 17) – ರಸ್ತೆ ಸುರಕ್ಷತಾ ಸಪ್ತಾಹವನ್ನು ಆಚರಿಸಿ ಶಾಲೆಯ ಸಾರಿಗೆ (ಆಟೋರಿಕ್ಷಾ, ಶಾಲಾ ಬಸ್/ವ್ಯಾನ್) ಚಾಲಕರಿಗೆ ಸುರಕ್ಷತಾ ಕ್ರಮಗಳ ಬಗ್ಗೆ ಅರಿವು ಮೂಡಿಸುವುದು.

**ಫೆಬ್ರುವರಿ:**

- ಹೀಟ್ ವೇವ್ಸ್ - ಬಿಸಿ ಗಾಳಿಯು ಬೀಸುವ ಸಂದರ್ಭದಲ್ಲಿ ವಹಿಸಬೇಕಾದ (DOs ಮತ್ತು DONs) ಕ್ರಮಗಳ ಪರಿಚಯ ಮಾಡಿಸುವುದು
- ಪ್ರಥಮ ಚಿಕಿತ್ಸೆ ಕುರಿತು ಮಕ್ಕಳಿಗೆ ಜಾಗೃತಿ ಮೂಡಿಸುವುದು..

**ಮಾರ್ಚ್:**

- ಮಾರ್ಚ್ -22 ವಿಶ್ವ ಜಲದಿನ – ನೀರನ್ನು ಉಳಿಸುವ ಚಟುವಟಿಕೆಗಳ ಆಯೋಜನೆ ಕುರಿತು ಮಾರ್ಗದರ್ಶಿಸುವುದು.

- ಶಾಲಾ ಸುರಕ್ಷತಾ ಸಪ್ತಾಹ: ಅಣಕು ವ್ಯಾಯಾಮಗಳು, ಮಾನ್ಯತೆ ರ್‍ಯಾಲಿ (rally) ಪ್ರದರ್ಶನ, ದೃಶ್ಯ ಆಡಿಯೋ ಪ್ರದರ್ಶನ ಇತ್ಯಾದಿಗಳ ಮೂಲಕ ಮಕ್ಕಳಲ್ಲಿ ಜಾಗೃತಿ ಮೂಡಿಸುವುದು.

ಏಪ್ರಿಲ್:

- ಏಪ್ರಿಲ್-7 ವಿಶ್ವ ಆರೋಗ್ಯ ದಿನ. ಆರೋಗ್ಯ ಮತ್ತು ಸುರಕ್ಷತೆಯ ಕುರಿತು ಮಕ್ಕಳಿಗೆ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು. ಅಸ್ತಿತ್ವದಲ್ಲಿರುವ ಶಾಲಾ ಸುರಕ್ಷತೆ, ಭದ್ರತೆ ಮತ್ತು ವಿಪತ್ತು ನಿರ್ವಹಣೆ ಯೋಜನೆಗಳ ಪರಿಶೀಲನೆ ಕೈಗೊಳ್ಳುವುದು.

ಮೇಲಿನ ಎಲ್ಲಾ ಸೂಚಿತ ಚಟುವಟಿಕೆಗಳನ್ನು ಆಯಾ ತಿಂಗಳಲ್ಲಿ ಆಯೋಜಿಸಲು ಹಾಗೂ ಕಾರ್ಯಕ್ರಮಗಳ ಫೋಟೋ ಸಹಿತ ವರದಿ ಸಿದ್ಧಪಡಿಸಲು ಸೂಚಿಸಿದೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು ತ್ರೈಮಾಸಿಕ ವರದಿಯನ್ನು ಮಾನ್ಯ ಆಯುಕ್ತರಿಗೆ ಸಲ್ಲಿಸುವುದು. ಹಾಗೂ ಮಾಹಿತಿಗಾಗಿ dsertengcell@gmail.com ಗೆ ಸಲ್ಲಿಸಲು ಸೂಚಿಸಿದೆ.

ಸ.ಹಿ.ಕ.ಅಂ

ಆಯುಕ್ತರು,
ಶಾಲಾ ಶಿಕ್ಷಣ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು

ಪ್ರತಿಗಳು:

1.ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ರವರಿಗೆ ಅಗತ್ಯ ಕ್ರಮಕ್ಕಾಗಿ.

2.ರಾಜ್ಯದ ಎಲ್ಲಾ ಡಯಟ್‌ಗಳ ಪ್ರಾಂಶುಪಾಲರು ರವರಿಗೆ ಅಗತ್ಯ ಕ್ರಮಕ್ಕಾಗಿ.

3.ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಉಪನಿರ್ದೇಶಕರು (ಆಡಳಿತ) ರವರ ಮುಖಾಂತರ ಅಗತ್ಯ ಕ್ರಮಕ್ಕಾಗಿ.